**ಮೂ.ದಾ.ನಂ.110/2017**

ಡಿ.ಡಬ್ಲ್ಯು2

(ಇಂದು ದಿನಾಂಕ: **08-12-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ.ಎಮ್.ಎನ್.ಎಸ್. ವಕೀಲರಿಂದಃ**

ಹದ್ದುಬಸ್ತ ಸರ್ವೆಗಾಗಿ ಪ್ರತಿವಾದಿಯು ಅರ್ಜಿಯನ್ನು ನೀಡಿರುತ್ತಾರೆ. ಸದ್ರಿ ಸರ್ವೆ ನಂಬರ **745/1** ಕ್ಕೆ ಸಂಬಂಧಿಸಿದಂತೆ ಹದ್ದುಬಸ್ತು ಸರ್ವೆಗಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ದಿನಾಂಕಃ 18/11/2017 ರಲ್ಲಿ ಆಳತೆಗಾಗಿ ನಾನು ಸ್ಥಳಕ್ಕೆ ಬಂದಿರುತ್ತೇನೆ ಎಂದರೆ ಸರಿ. ಸರ್ವೆಗಾಗಿ ಬಂದಾಗ ನಾನು ಕಳುಹಿಸಿದ ನೋಟೀಸ ವಾದಿಯರಿಗೆ ತಲುಪಿಲ್ಲ ಎಂದರೆ ಸಾಕ್ಷಿಯು ನಾನು ಆಳತೆಗಾಗಿ ಜಾಗಕ್ಕೆ ಹೋದಂತಹ ಸಂದರ್ಭದಲ್ಲಿ ಈ ಕುರಿತಾಗಿ ನನಗೆ ವಾದಿಯು ತಿಳಿಸಿದ್ದು, ಈ ಬಗ್ಗೆ ನಾನು ಅಂಚೆ ಪೋಸ್ಟ ಮ್ಯಾನನ ಬಳಿ ದೂರವಾಣಿ ಮುಖಾಂತರ ವಿಚಾರಿಸಿದಾಗ ಆತನು ನೀಡಿರುವುದಾಗಿ ತಿಳಿಸಿದ್ದು, ಆದರೂ ಸಹ ನಾನು ಸ್ಥಳದಲ್ಲಿ ಬೇರೆ ದಿನಾಂಕ ದಿನಾಂಕಃ 28/11/2017 ರಂದು ಮತ್ತೋಮ್ಮೆ ನೋಟೀಸು ನೀಡಿ ಆಳತೆ ಮಾಡುವುದಾಗಿ ಇಬ್ಬರಿಗೂ ತಿಳಿಸಿರುತ್ತೇನೆ.

ದಿನಾಂಕಃ **18/11/2017** ರಂದು ಆಳತೆಗಾಗಿ ನಾನು ನೀಡಿದ್ದೇನೆ ಎನ್ನಲಾದ ನೋಟೀಸನ್ನು ನೋಂದಾಯಿತ ಅಂಚೆ ಮುಖಾಂತರ ಕಳುಹಿಸಿರುವುದಿಲ್ಲ. ಹದ್ದುಬಸ್ತು ಸರ್ವೆಗಾಗಿ ನೋಟೀಸನ್ನು ಕಳುಹಿಸುವ ಸಂದರ್ಭದಲ್ಲಿ ನೋಂದಾಯಿತ ಅಂಚೆಯು ಮೂಲಕ ನೋಟೀಸನ್ನು ನೀಡಬೇಕು ಎಂಬ ನಿಯಮ ಇದೆ ಎಂದರೆ ಸರಿ. ದಿನಾಂಕಃ 18/11/2017 ರಂದು ನಾನು ಸ್ಥಳಕ್ಕೆ ಬಂದಾಗ ನೋಟೀಸನ್ನು ನೀಡಿದೇ ಆಳತೆ ಮಾಡಿರುವ ಕ್ರಮ ಸರಿ ಇಲ್ಲ ಎಂದು ವಾದಿಯರು ತಕರಾರನ್ನು ಮಾಡಿದ್ದರು ಎಂದರೆ

ಸಾಕ್ಷಿಯು ನಾನು ನೋಟೀಸನ್ನು ನೀಡಿದ್ದು ಅದು ಅವರಿಗೆ ತಲುಪಿದ್ದು ನಂತರ ನಾನು ನೋಂದಾಯಿತ ನೋಟೀಸನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ದಿನಾಂಕಃ **18/11/2017** ರಂದು ಆಳತೆಗೆ ನಿಗದಿಪಡಿಸಿ ಕುರಿತಾಗಿ ಯಾವುದೇ ನೋಟೀಸ ನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ವಾದಿಗೆ ದಿನಾಂಕಃ **18/11/2017** ರಂದು ಆಳತೆಯ ದಿನಾಂಕ ನಿಗದಿಪಡಿಸಿದ ಕುರಿತು ವಾದಿಗೆ ಯಾವುದೇ ನೋಟೀಸನ್ನು ನೀಡಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ವಾದಿಯರಿಗೆ ಕಳುಹಿಸಿದರೆ ಷದ್ರಿ ನೋಟೀಸನ ಪ್ರತಿ ನನ್ನ ಕಛೇರಿಯ ಕಡತದಲ್ಲಿ ಇರುತ್ತಿದ್ದು, ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೆ ಎಂದರೆ ಸಾಕ್ಷಿಯು ನನ್ನ ಬಳಿ ಇದೆ ಎಂದು ನುಡಿಯುತ್ತಾರೆ.

ದಿನಾಂಕಃ **18/11/2017** ರಂದು ವಾದಿಯರಿಗೆ ಯಾವುದೇ ನೋಟೀಸು ಮಾಡದೇ ಸ್ಥಳಕ್ಕೆ ಬಂದಿರುವ ಕುರಿತಾಗಿ ವಾದಿಯರು ಸಹಾಯಕ ಆಯುಕ್ತರು ಹಾಗೂ ಎ.ಡಿ.ಎಲ್.ಆರ್. ಗೆ ನನ್ನ ವಿರುದ್ಧ ವಾದಿಯರು ದೂರನ್ನು ನೀಡಿದ್ದಾರೆ ಎಂದರೆ ಸಾಕ್ಷಿಯು ಈ ಕುರಿತಾಗಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

ದಿನಾಂಕಃ **28/11/2017** ರಂದು ವಾದಿಯರಿಗೆ ನೋಂದಾಯಿತ ಅಂಚೆ ಮುಖಾಂತರ ಕಳುಹಿಸಿದ ನೋಟೀಸು ವಾದಿಯರಿಗೆ ಸ್ವೀಕೃತಿ ಆದ ಕುರಿತು ಅಂಚೆ ಸ್ವೀಕೃತಿ ನನ್ನ ಕಛೇರಿಯ ಕಡತದಲ್ಲಿ ಇರುವುದಿಲ್ಲ. ದಿನಾಂಕಃ 2**8/11/2017** ರ ಆಳತೆಯ ಕುರಿತಾಗಿ ನಾನು ದಿನಾಂಕಃ **19/11/2017** ರಂದು ನೋಟೀಸನ್ನು ನೀಡಿರುತ್ತೇನೆ. ಈ ನೋಟೀಸು ವಾದಿಯರಿಗೆ ಜ್ಯಾರಿಯಾದ ಬಗ್ಗೆ ನನ್ನ ಕಡತದಲ್ಲಿ ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸರಿ.

**ಮೂ.ದಾ.ನಂ.**110/2017

ಪಿ.ಡಬ್ಲ್ಯು2

ಸಾಕ್ಷಿಗೆ ಮಧ್ಯಂತರ ಅರ್ಜಿ ಸಂಖ್ಯೆ 8 ನ್ನು ತೋರಿಸಲಾಗಿ, ಸದ್ರಿ ಅರ್ಜಿಯು ನ್ಯಾಯಾಲಯದಿಂದ ನೀಡಿದ ನೋಟೀಸನೊಂದಿಗೆ ಬಂದಿತ್ತಾ ಎಂದರೆ ಸಾಕ್ಷಿಯು ನನಗೆ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದಿಂದ ನನಗೆ ನೀಡಿದ ಸಮನ್ಸನೊಂದಿಗೆ ಮಧ್ಯಂತರ ಅರ್ಜಿ ಸಂಖ್ಯೆ 8 ಬಂದಿರುವುದಿಲ್ಲ. ನನಗೆ ನ್ಯಾಯಾಲಯದಿಂದ ನನಗೆ ನೀಡಿದ ಸಮನ್ಸನೊಂದಿಗೆ ಮಧ್ಯಂತರ ಅರ್ಜಿ ಸಂಖ್ಯೆ 8 ಬಂದಿದ್ದರೂ ಸಹ ಬರಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಧ್ಯಂತರ ಅರ್ಜಿ ಸಂಖ್ಯೆ 8 ರಲ್ಲಿ ನನಗೆ ಸಂಪೂರ್ಣ ಕಡತವನ್ನು ತರುವಂತೆ ನಮೂದು ಇದ್ದರೂ ಸಹ ನಾನು ತರಲಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ನೋಟೀಸು ಜ್ಯಾರಿಯಾದ ಬಗ್ಗೆ ಸದ್ರಿ ದಾಖಲಾತಿಯಲ್ಲಿ ನಮೂದು ಇರುತ್ತಿದ್ದು ಸದ್ರಿ ನೋಟೀಸು ಜ್ಯಾರಿಯಾಗದೇ ಇರುವುದರಿಂದ ನಾನು ಸಂಪೂರ್ಣ ಕಡತವನ್ನು ತಂದಿಲ್ಲ ಎಂದರೆ ಸರಿಯಲ್ಲ.

ದಿನಾಂಕಃ **28/11/2017** ರ ನೀಡಿದ ನೋಟೀಸಗೆ ವಾದಿಯು ಎಡಿಎಲ್ಆರ್ ಇವರಿಗೆ ದಿನಾಂಕಃ 23/11/2017 ರಂದು ಲಿಖಿತ ತಕರಾರನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ದಿನಾಂಕಃ 29/11/2017 ರಂದು ವಾದಿಯು ಪುನಃ ಎಡಿಎಲ್ ಆರ್ ಕುಮಟಾ ಇವರಿಗೆ ಆಳತೆ ಮಾಡಿದ ಬಗ್ಗೆ ಲಿಖಿತ ತಕರಾರನ್ನು ನೀಡಿದ್ದಾರೆ ಎಂದರೆ ಸಾಕ್ಷಿಯು ನಾನು ದಿನಾಂಕಃ ದಿನಾಂಕಃ **28/11/2017** ರಂದು ನನ್ನ ಆಳತೆ ಕೆಲಸವನ್ನು ಪೂರೈಸಿರುವುದರಿಂದ ಸದ್ರಿ ತಕರಾರನ್ನು ನನಗೆ ನೀಡುವ ಪ್ರಮೇಯ ಬರುವುದಿಲ್ಲ ಎಂದು ನುಡಿಯುತ್ತಾರೆ.

ದಿನಾಂಕಃ **28/11/2017** ರಂದು ಆಳತೆ ಮಾಡಿದೆ ಎನ್ನಲಾದ ಸರ್ವೆ ನಂಬರ 745/1 ಆಗಿರುತ್ತದೆ. ಸದ್ರಿ ಸರ್ವೆ ನಂಬರನ ಕುರಿತಾಗಿ ಹದ್ದು ಬಸ್ತು ಸರ್ವೆ ಸರ್ವೆಯನ್ನು ಮಾಡಿರುತ್ತೇನೆ. ಸರ್ವೆ

ಮ್ಯಾನ್ಯುಯಲ್‌ನಲ್ಲಿ ಇರುವ ನಿಯಮಾವಳಿಗಳ ಪ್ರಕಾರ ಒಂದು ಸರ್ವೆ ನಂಬರನ ಸರ್ವೆ ಗಡಿಗಳನ್ನು ಗುರುತಿಸಬೇಕಾದರೆ ಅರ್ಜಿ ನೀಡಿದಂತಹ ಸರ್ವೆ ನಂಬರ ಹಾಗೂ ಅದರ ಲಗ್ತ ಸರ್ವೆ ನಂಬರಗಳನ್ನು ಆಳತೆ ಮಾಡಬೇಕು ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವಶ್ಯ ಬಿದ್ದರೆ ಮಾತ್ರ ಆಳತೆ ಮಾಡಬೇಕು ಎಂದು ನುಡಿಯುತ್ತಾರೆ. ಸರ್ವೆ ಮ್ಯಾನ್ಯುಯಲ್‌ನಲ್ಲಿ ಇರುವ ನಿಯಮಾವಳಿಗಳಲ್ಲಿ ಅವಶ್ಯ ಎಂಬ ಪದ ಇರುವುದಿಲ್ಲ. ನಾನು ಈ ಮೇಲೆ ಹೇಳಿದ ಅವಶ್ಯಕತೆ ಎಂಬ ಪದವನ್ನು ನಾನೇ ಈಗ ಬಳಸಿಕೊಂಡು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂಬರ 745 ಹಿಸ್ಸಾ 1 ನ್ನು ಸರ್ವೆ ನಿಯಮಾವಳಿಗಳ ಪ್ರಕಾರ ಆಳತೆ ಮಾಡಲಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ 745 ಹಿಸ್ಸಾ 1 ನ್ನು ಆಳತೆ ಮಾಡುವ ಸಂದರ್ಭದಲ್ಲಿ ಸರ್ವೆ ನಂಬರ 744 ಹಿಸ್ಸಾ 1 ನ್ನು ಆಳತೆ ಮಾಡದೇ ಇರುವುದರಿಂದ ನಾನು ತಯಾರಿಸಿದ ನಕ್ಷೆಯು ನಮ್ಮ ಸರ್ವೆ ಮ್ಯಾನ್ಯುಯಲ್‌ಗೆ ವಿರುದ್ಧವಾಗಿದೆ ಎಂದರೆ ಸರಿಯಲ್ಲ.

ಸರ್ವೆ ನಂಬರ 745 ಹಿಸ್ಸಾ 1 ನ್ನು ಆಳತೆ ಮಾಡುವಾಗ ಮೂಲ ಟಿಪ್ಪಣಿ, ಹಿಸ್ಸಾ ಟಿಪ್ಪಣಿ ಹಾಗೂ ಪಿಟಿ ಶೀಟ್‌ನ ಆಧಾರದ ಮೇಲೆ ನಾನು ಸರ್ವೆ ಮಾಡಿರುತ್ತೇನೆ. ನಾನು ಈ ದಾಖಲಾತಿಗಳನ್ನು ಸರ್ವೆ ಮಾಡುವ ಸಂದರ್ಭಗಳಲ್ಲಿ ತಗೆದುಕೊಂಡು ಹೋಗಿರುತ್ತೇವೆ. ನಾನು ಆಳತೆ ಮಾಡಲು ತೆಗೆದುಕೊಂಡು ಹೋದಂತಹ ಎಲ್ಲಾ ದಾಖಲಾತಿಗಳು ಕಡತದಲ್ಲಿ ಇದೆ ಎಂದರೆ ಸರಿ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನದ ಅವಧಿಗೆ ಮಾಡಲು ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ